# ಎಲ್ಲ ಕಾಲಕ್ಕೂ ಸಲ್ಲುವ ಗಾಂಧಿ

## ಗಾಂಧೀಜಿಯ ಆಯ್ದ ಬರಹಗಳು

ಆಧುನಿಕ ಜಗತ್ತಿನ ಶ್ರೇಷ್ಠ ನಾಯಕರೂ ಚಿಂತಕರೂ ಆಗಿದ್ದ ಮಹಾತ್ಮ ಗಾಂಧೀಜಿ ಬದುಕಿನ ಎಲ್ಲ ಮುಖಗಳ ಬಗೆಗೂ ಬಹು ಸೂಕ್ಷ್ಮವಾಗಿ ಯೋಚಿಸುತ್ತಿದ್ದರು. ಅವರು ಸಮಗ್ರ ತತ್ತ್ವಜ್ಞಾನಿಯಾಗಿದ್ದರು. ದೇಶದ ಬಿಡುಗಡೆಯ ಹೋರಾಟದ ನಾಯಕತ್ವ ವಹಿಸಿದ್ದ ಅವರ ಚಿಂತನೆಗಳಿಗೆ ಸಹಜವಾಗಿಯೇ ತಕ್ಷಣದ ತುರ್ತು, ಜವಾಬ್ದಾರಿಗಳಿದ್ದವು; ಹಾಗೆಯೇ ಈ ಚಿಂತನೆಗಳಿಗೆ ಎಲ್ಲ ಕಾಲಕ್ಕೂ ಸಲ್ಲುವ ವ್ಯಾಪಕ ಗುಣಗಳೂ ಇವೆ.

ಗಾಂಧೀಜಿ ಚಿಂತನೆಗಳು ಪ್ರೀತಿ, ಕರುಣೆ, ತಾಯ್ತನ ಹಾಗೂ ನೈತಿಕ ನೋಟಗಳಿಂದ ಹುಟ್ಟಿವೆ. ಮಾನವ ಮನಸ್ಸುಗಳನ್ನು ಬೆಸೆಯುವ ತುಡಿತಗಳ ಜೊತೆಗೇ ಹೊಸ ಜಗತ್ತನ್ನು ಕಟ್ಟುವ ಕನಸಿನಿಂದಲೂ ಅವರ ಚಿಂತನೆಗಳು ರೂಪುಗೊಂಡಿವೆ. ಮನುಷ್ಯ, ಸಮಾಜ, ಜಗತ್ತು, ಸಾಹಿತ್ಯ, ಧರ್ಮ ಹೀಗೆ ಯಾವುದನ್ನು ಕುರಿತು ಗಾಂಧೀಜಿ ಬರೆದರೂ, ಮಾತಾಡಿದರೂ ಅವರ ಉದಾರ ದೃಷ್ಟಿಕೋನ ಅಲ್ಲಿ ಮೂಡುತ್ತಿತ್ತು. ಗಾಂಧೀಜಿ ರೂಪಿಸಿಕೊಂಡ ಅಹಿಂಸೆ, ಸ್ವರಾಜ್ಯ, ಅಸಹಕಾರ ಮುಂತಾದ ಪರಿಕಲ್ಪನೆಗಳು ದೈನಂದಿನ ಮಹತ್ತ್ವವನ್ನೂ, ಸರ್ವಕಾಲದ ಅಗತ್ಯವನ್ನೂ ಒಳಗೊಂಡಿವೆ. ಆದ್ದರಿಂದಲೇ ಗಾಂಧೀ ಚಿಂತನೆ ಎಲ್ಲ ಕಾಲಕ್ಕೂ ಸಲ್ಲುತ್ತಿರುತ್ತದೆ; ಹೊಸ ಹೊಸ ರೂಪದಲ್ಲಿ ಬೆಳೆಯುತ್ತಲೇ ಇರುತ್ತದೆ. ಗಾಂಧೀ ಚಿಂತನೆಯ ಹಲವು ಮುಖಗಳನ್ನು ಮಂಡಿಸುವ ಆಯ್ದ ಬರಹಗಳನ್ನು ಗಾಂಧೀಜಿಯ 152ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 'ಮಯೂರ'ದ ಓದುಗರಿಗಾಗಿ ಕೊಡುತ್ತಿದ್ದೇವೆ.